**ಓ.ಎಸ್. 73/2022 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 28.06.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

2 ವರ್ಷದ ಹಿಂದೆ ನನ್ನ ಅಣ್ಣನನ್ನು ಭಾಗ ನೀಡಲು ಕೇಳಿರುತ್ತೇನೆ. ದಾವಾ ಆಸ್ತಿಗಳನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಗಳಲ್ಲಿ ರಾಗಿ, ಭತ್ತ, ಕಬ್ಬು ಬೆಳೆಯುತ್ತಾರೆ. ದಾವಾ ಆಸ್ತಿಗಳು ಮಳೆಯಾಶ್ರಿತ ಜಮೀನುಗಳು ಎಂದರೆ ಸಾಕ್ಷಿ ಸ್ವಲ್ಪ ಜಮೀನುಗಳು ನೀರಾವರಿ ಇರುತ್ತವೆ ಎನ್ನುತ್ತಾರೆ. ದಾವಾ ಆಸ್ತಿಗಳಲ್ಲಿ ಬೋರ್ ಇದೆ, ಯಾವ ಸರ್ವೆ ನಂಬರಿನಲ್ಲಿ ಇದೆ ಎಂದು ಹೇಳಲು ಆಗುವುದಿಲ್ಲ. ದಾವಾ ಆಸ್ತಿ ಸಂಖ್ಯೆ 5, 7 ರಿಂದ 9 ರಲ್ಲಿ ಯಾವುದೇ ಬೆಳೆ ಬೆಳೆಯುವುದಿಲ್ಲ, ಅವು ಖುಷ್ಕಿ ಜಮೀನು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಂದ ಯಾವುದೇ ವರಮಾನ ಇಲ್ಲದ ಕಾರಣ ನನ್ನ ಅಣ್ಣನ ಕುಟುಂಬಕ್ಕೆ ಜೀವನ ಮಾಡುವುದು ಕಷ್ಟವಾಗುತ್ತಿತ್ತು ಎಂದರೆ ಸರಿಯಲ್ಲ. ನನ್ನ ಅಣ್ಣ ದಲ್ಲಾಳಿ ಕೆಲಸ ಮಾಡುತ್ತಿದ್ದರು. ನನ್ನ ಅಣ್ಣನ ಮಕ್ಕಳು ಟ್ರಾಕ್ಟರ್ ನ್ನು ಇಟ್ಟುಕೊಂಡು ಕೋರೆ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ 1,4,10,11,14, ಹಾಗೂ 15 ನ್ನು ನನ್ನ ಅಣ್ಣ ಹಾಗೂ ಅವರ ಮಕ್ಕಳು ಅವರ ಸ್ವಯಾರ್ಜಿತವಾಗಿ ಸಂಪಾದಿಸಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ಕುಟುಂಬದ ಸ್ವತ್ತುಗಳಿಂದ ಸಂಪಾದಿಸಿ ಪಡೆದಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ಹಣ ಇಟ್ಟು ಹೋಗಿದ್ದರು, ಆ ಹಣದಿಂದ ಖರೀದಿಸಿದ್ದಾರೆ. ಪಿತ್ರಾರ್ಜಿತ ಆಸ್ತಿಗಳಲ್ಲಿ ಯಾವುದೇ ಆದಾಯ ಇಲ್ಲ, ಅವುಗಳಿಂದ ಬರುವ ಆದಾಯದಲ್ಲಿ ಜೀವನ ಮಾಡುವುದು ಕಷ್ಟ ಎಂದರೆ ಸರಿಯಲ್ಲ. ಪ್ರತಿವಾದಿ 2, 3 ದಾವಾ ಆಸ್ತಿ ಸಂಖ್ಯೆ 13 ರಲ್ಲಿ 40-50 ಲಕ್ಷ ಖರ್ಚು ಮಾಡಿ ಮನೆ ಕಟ್ಟಿದ್ದಾರೆ ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ 3 ಮತ್ತು 6 ನನ್ನ ತಂದೆಯ ಹೆಸರಿನಲ್ಲಿವೆ. ದಾವಾ ಆಸ್ತಿ ಸಂಖ್ಯೆ 3 ಮತ್ತು 6 ನ್ನು 4ನೇ ಪ್ರತಿವಾದಿ ತನ್ನ ಸ್ವಂತ ಹಣದಿಂದ ಖರೀದಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1ನೇ ಪ್ರತಿವಾದಿ 5ನೇ ಪ್ರತಿವಾದಿಯ ಮುಖಾಂತರ ತನ್ನ ಗಂಡು ಮಕ್ಕಳ ಮೇಲೆ ದಾವೆ ಹೂಡಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಕುಟುಂಬದ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

ಕುಟುಂಬದ ಹಳೆಯ ಮನೆಯನ್ನು ಅಸಲು ದಾವೆ ಸಂಖ್ಯೆ 75/2017 ರಲ್ಲಿ 5ನೇ ಪ್ರತಿವಾದಿಗೆ ನೀಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು, 1, 2, ಹಾಗೂ 5ನೇ ಪ್ರತಿವಾದಿಗಳು ಸೇರಿ ಪ್ರತಿವಾದಿ 3, 4 ರವರಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ, ಆದಕಾರಣ 5ನೇ ಪ್ರತಿವಾದಿಯ ಭಾಗಕ್ಕೆ ಬಂದ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ದಾವಾ ಸಂಖ್ಯೆ 75/2017 ರಲ್ಲಿ ತನ್ನ ಭಾಗಕ್ಕೆ ಬಂದ ಜಮೀನನ್ನು ಮಾರಾಟ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಅಣ್ಣ ಮಾರಾಟ ಮಾಡಿದ ಜಮೀನು ಈ ದಾವೆಯಲ್ಲಿ ಸೇರಿಸಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಅಣ್ಣ ಹಾಗೂ ಆತನ ಮಗಳ ಭಾಗಕ್ಕೆ ಬಂದಿರುವ ಆಸ್ತಿಗಳನ್ನು ಬಿಟ್ಟು ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 3 ಮತ್ತು 4ನೇ ಪ್ರತಿವಾದಿಯ ಭಾಗಕ್ಕೆ ಬಂದ ಆಸ್ತಿಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಈಗಾಗಲೇ ಅಸಲು ದಾವೆ ಸಂಖ್ಯೆ 75/2017 ರಲ್ಲಿ ವಿಭಾಗ ಮಾಡಿಕೊಂಡಿರುವ ಕಾರಣ ನನಗೆ ಹಾಗೂ 6ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 3, 4 ರವರು ಭಾಗಕ್ಕೆ ಬಂದ ಮನೆಯನ್ನು ಹೆಚ್ಚಿನ ಹಣವನ್ನು ಖರ್ಚು ಮಾಡಿ ನವೀಕರಣ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಹಾಗೂ ಅವರ ಗಂಡು ಮಕ್ಕಳು ಮಾತನಾಡುತ್ತಿಲ್ಲ. ನನ್ನ ಅಣ್ಣ ತನ್ನ ಗಂಡು ಮಕ್ಕಳ ಮೇಲಿನ ದ್ವೇಷದಿಂದ ನನ್ನ ಕಡೆಯಿಂದ ಈ ದಾವೆ ಹೂಡಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಎಂ.ಮಂಜುನಾಥ)**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಪಾಂಡವಪುರ**